KAMS510039752019

**<u>ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ</u>**

**<u>ನ್ಯಾಯಾಲಯ, ನಂಜನಗೂಡು.</u>**

**ಉಪಸ್ಥಿತರುಃ ಶ್ರೀಮತಿ. ಶ್ರುತಿ ಶ್ರೀ. ಎಸ್.**

**ಬಿ.ಎ., ಎಲ್‌ಎಲ್ ಬಿ.,**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು, ನಂಜನಗೂಡು.

ದಿನಾಂಕಃ 29 ನೇ ಜೂನ್, 2026

**<u>ಸಿ.ಸಿ.ಸಂಖ್ಯೆ: 1792/2019</u>**

**ಫಿರ್ಯಾದುದಾರರುಃ** ಕರ್ನಾಟಕ ಸರ್ಕಾರದ ಪರವಾಗಿ
ಗ್ರಾಮಾಂತರ ಪೊಲೀಸ್ ಠಾಣೆ, ನಂಜನಗೂಡು

**(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)**

**// ವಿರುದ್ಧ //**

**ಆರೋಪಿಃ** ಶ್ರೀ.ಮಸಣಶೆಟ್ಟಿ ಬಿನ್ ಲೇಟ್ ಮಾದಶೆಟ್ಟಿ
ವಯಸ್ಸು ಸುಮಾರು 65 ವರ್ಷ,
ವಾಸಃ ಹೆಗ್ಗಡಹಳ್ಳಿ, ನಂಜನಗೂಡು ತಾಲ್ಲೂಕು,
ಮೈಸೂರು ಜಿಲ್ಲೆ.

**(ಪ್ರತಿನಿಧಿಸುವವರು ಶ್ರೀ.ನಾರಾಯಣಸ್ವಾಮಿ. ವಕೀಲರು)**

| | | |
|---|---|---|
| ಘಟನೆ ಸಂಭವಿಸಿದ ದಿನಾಂಕ | : | 31.03.2019 |
| ಅಂತಿಮ ವರದಿ ಸಲ್ಲಿಸಿದ ದಿನಾಂಕ | : | 31.10.2019 |
| ವಿಚಾರಣೆ ಪ್ರಾರಂಭವಾದ ದಿನಾಂಕ | : | 13.11.2024 |
| ವಿಚಾರಣೆ ಕೊನೆಗೊಂಡ ದಿನಾಂಕ | : | 04.02.2026 |
| ಅಪರಾಧದ ಸ್ವರೂಪ | : | ಕರ್ನಾಟಕ ಅಬಕಾರಿ ಕಾಯಿದೆ ಕಲಂ-32 ಮತ್ತು 34 ರ ರೀತ್ಯಾ |

| | | |
|---|---|---|
| ನ್ಯಾಯಾಧೀಶರ ಅಭಿಪ್ರಾಯ | : | ಅಂತಿಮ ಆದೇಶದಂತೆ |

(ಶ್ರುತಿ ಶ್ರೀ ಎಸ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ನಂಜನಗೂಡು.

**ತೀರ್ಪು**

ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿಗಳು ಆರೋಪಿಯ ವಿರುದ್ಧ ಕರ್ನಾಟಕ ಅಬಕಾರಿ ಕಾಯಿದೆ ಕಲಂ-32 ಮತ್ತು 34 ರಡಿಯಲ್ಲಿನ ಆರೋಪಗಳಿಗಾಗಿ ಠಾಣಾ ಗುನ್ನೆ ಸಂಖ್ಯೆ-57/2019 ರಂತೆ ಸಲ್ಲಿಸಿರುವ ದೋಷಾರೋಪಣಾಪಟ್ಟಿಯ ಆಧಾರದ ಮೇಲೆ ಪ್ರಕರಣವನ್ನು ನೋಂದಾಯಿಸಿಕೊಳ್ಳಲಾಗಿದೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ:-**

ದಿನಾಂಕ 31.03.2019 ರಂದು ಸಂಜೆ 18.30 ಗಂಟೆ ಸಮಯದಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹೆಗ್ಗಡಹಳ್ಳಿ ಗ್ರಾಮದ ಉಪ್ಪಾರಶೆಟ್ಟಿ ಜನಾಂಗದ ಬೀದಿಯಲ್ಲಿರುವ ಆರೋಪಿಯು ತನ್ನ ಮನೆಯ ಮುಂಭಾಗದಲ್ಲಿ ಯಾವುದೇ ರಹದಾರಿ ಇಲ್ಲದೇ ಅಕ್ರಮವಾಗಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಒಟ್ಟು ರೂ.2,152.72 ಮೌಲ್ಯದ 90 ಎಂ.ಎಲ್. ನ 71 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಕಂಪನಿಯ ಟೆಟ್ರಾ ಪ್ಯಾಕೇಟ್‌ಗಳನ್ನು ಸ್ವಾಧೀನದಲ್ಲಿ ಇಟ್ಟು ಮಾರಾಟ ಮಾಡಿ ಹಣ ಸಂಪಾದನೆ ಮಾಡುತ್ತಿದ್ದು, ಸದರಿ ಟೆಟ್ರಾ ಪ್ಯಾಕೇಟ್‌ಗಳನ್ನು ಮಹಜರ್ ಮೂಲಕ ಸ್ವಾಧೀನಪಡಿಸಿಕೊಂಡಿರುವುದಾಗಿ ಆಪಾದಿಸಿ ಈ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**3.** ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿಗಳು ಠಾಣಾ ಮೊಕದ್ದಮೆ ಸಂಖ್ಯೆ.57/2019 ರಂತೆ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಂಡು ತನಿಖೆಯನ್ನು ಪೂರ್ಣಗೊಳಿಸಿದ ನಂತರ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ದೋಷಾರೋಪಣಾಪಟ್ಟಿಯನ್ನು ಸ್ವೀಕರಿಸಿದ ನಂತರ ಈ ನ್ಯಾಯಾಲಯವು ಕರ್ನಾಟಕ ಅಬಕಾರಿ ಕಾಯಿದೆ ಕಲಂ-32 ಮತ್ತು 34 ರ ಅಪರಾಧಗಳಿಗೆ ಸಂಜ್ಞೆಯತೆಯನ್ನು ತೆಗೆದುಕೊಂಡಿರುತ್ತದೆ.

**4.** ಆರೋಪಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ನಂತರ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆಯ ಕಲಂ-207 ರಡಿಯಲ್ಲಿ ದೋಷಾರೋಪಣಾಪಟ್ಟಿಯ ನಕಲನ್ನು ನೀಡಲಾಯಿತು. ದೋಷಾರೋಪಣಾ ಪೂರ್ವದಲ್ಲಿ ವಿಚಾರಣೆ ಮಾಡಿ ನಂತರ ದೋಷಾರೋಪಣೆಯನ್ನು ರಚಿಸಿ ಆರೋಪಿಗೆ ಓದಿ ವಿವರಿಸಲಾಗಿ, ಆರೋಪಿ ತಾನು ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕೆಂದು ಉತ್ತರಿಸಿದ ಪ್ರಯುಕ್ತ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗೆ ಹಾಕಿಕೊಳ್ಳಲಾಗಿರುತ್ತದೆ.

**5.** ಪ್ರಕರಣವನ್ನು ಬೆಂಬಲಿಸಿ ಅಭಿಯೋಜನೆಯವರು ಒಟ್ಟು 5 ಜನ ಸಾಕ್ಷಿದಾರರನ್ನು ಫ್ರಾಸಾ-1 ರಿಂದ 5 ಎಂದು ವಿಚಾರಣೆ ಮಾಡಿ, ಅವರ ಮೂಲಕ ನಿಶಾನೆ ಪಿ-1 ರಿಂದ 6 ರ ದಾಖಲೆಗಳನ್ನು ಮತ್ತು ಮುದ್ದೆ ಮಾಲು-1 ರಿಂದ 79 ನ್ನು ಗುರುತಿಸಿಕೊಂಡಿರುತ್ತಾರೆ.

**6.** ದಂಡ ಪ್ರಕ್ರಿಯಾ ಸಂಹಿತೆಯ ಕಲಂ-313 ರಡಿಯಲ್ಲಿ ಅಭಿಯೋಜನಾ ಪ್ರಕರಣದ ಸಾಕ್ಷಿದಾರರ ಸಾಕ್ಷ್ಯದಲ್ಲಿ ಆರೋಪಿಯ ವಿರುದ್ಧ ನುಡಿದಿರುವ ಸಾಕ್ಷ್ಯವನ್ನು ಓದಿ ವಿವರಿಸಿದ ಅಭಿಯೋಜನೆಯವರ ಸಾಕ್ಷ್ಯದ ಬಗ್ಗೆ ಪ್ರಶ್ನಿಸಿ ಹೇಳಿಕೆಗಳನ್ನು ದಾಖಲಿಸಿಕೊಂಡಿದೆ. ಅರೋಪಿ ಅಭಿಯೋಜನಾ ಸಾಕ್ಷ್ಯವನ್ನು ಅಲ್ಲಗಳೆದಿದ್ದು ತನ್ನ ಪರವಾಗಿ ಯಾವುದೇ

ರಕ್ಷಣಾತ್ಮಕ ಸಾಕ್ಷ್ಯಗಳ ವಿಚಾರಣೆ ಮಾಡಲು ಬಯಸಿರುವುದಿಲ್ಲ.

**7.** ವಾದವನ್ನು ಆಲಿಸಿ ಕಡತವನ್ನು ಪರಿಶೀಲಿಸಿ ನೋಡಲಾಗಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ನಿರ್ಣಯಕ್ಕೆ ಬಂದಿರುತ್ತವೆ.

**ಅಂಶಗಳು**

1. ದಿನಾಂಕ 31.03.2019 ರಂದು ಸಂಜೆ 18.30 ಗಂಟೆ ಸಮಯದಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹೆಗ್ಗಡಹಳ್ಳಿ ಗ್ರಾಮದ ಉಪ್ಪಾರಶೆಟ್ಟಿ ಜನಾಂಗದ ಬೀದಿಯಲ್ಲಿರುವ ಆರೋಪಿಯು ತನ್ನ ಮನೆಯ ಮುಂಭಾಗದಲ್ಲಿ ಯಾವುದೇ ರಹದಾರಿ ಇಲ್ಲದೇ ಅಕ್ರಮವಾಗಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಒಟ್ಟು ರೂ.2,152.72 ಮೌಲ್ಯದ 90 ಎಂ.ಎಲ್. ನ 71 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಕಂಪನಿಯ ಟೆಟ್ರಾ ಪ್ಯಾಕೇಟ್‌ಗಳನ್ನು ಹೊಂದಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ-32 ರ ದಂಡನೀಯವಾದ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?
2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ಮೇಲೆ ಹೇಳಿದ ಪ್ರಮಾಣದ ಮಧ್ಯವನ್ನು ಕಾನೂನು ಬಾಹಿರವಾಗಿ ಸಂಗ್ರಹಿಸಿ ಯಾವುದೇ ಕಾನೂನು ಸಮ್ಮತ ಅಧಿಕಾರವಿಲ್ಲದೇ ಮಾರಾಟ ಮಾಡುತ್ತಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ-34 ರ ದಂಡನೀಯವಾದ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?
3. ಹಾಗಿದ್ದರೆ ಯಾವ ಆದೇಶ ?

**8.** ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರವು ಮುಂದಿನ ಕಾರಣಗಳಿಗಾಗಿ ಈ ಕೆಳಕಂಡತಿವೆ.

ಅಂಶಃ 1 ಮತ್ತು 2 – **ನಕಾರಾತ್ಮಕವಾಗಿ**

ಅಂಶಃ 3 – ಅಂತಿಮ ಆದೇಶದಂತೆ.

**ಕಾರಣಗಳು**

**9. ಅಂಶ.1 ಮತ್ತು 2:-** ಪ್ರಕರಣದ ವಾಸ್ತವಾಂಶಗಳ ನಿರೂಪಣೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಅಂಶ–1 ಮತ್ತು 2 ನ್ನು ಜೊತೆಯಾಗಿ ಚರ್ಚಿಸಲು ತೆಗೆದುಕೊಳ್ಳಲಾಗಿದೆ. ಅಭಿಯೋಜನೆಯು ದೋಷಾರೋಪಣಾಪಟ್ಟಿಯಲ್ಲಿನ ಒಟ್ಟು 10 ಜನ ಸಾಕ್ಷಿದಾರರ ಪೈಕಿ ಅಭಿಯೋಜನೆಯು ಚಾಸಾ–4 ರಿಂದ 6, 8 ಮತ್ತು 9 ರವರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಪ್ರಕರಣದಿಂದ ಕೈಬಿಡಲಾಗಿರುತ್ತದೆ. ಚಾಸಾ–1 ರಿಂದ , 7 ಮತ್ತು 10 ರವರನ್ನು ಫ್ರಾಸಾ–1 ರಿಂದ 5 ರವರನ್ನಾಗಿ ವಿಚಾರಣೆಗೊಳಪಡಿಸಿರುತ್ತಾರೆ. ಸಾಕ್ಷಿದಾರರ ಮೂಲಕ ನಿಶಾನೆ ಪಿ–1 ರಿಂದ 6 ರ ದಾಖಲೆಗಳನ್ನು ಮತ್ತು ಮುದ್ದೆ ಮಾಲು–1 ರಿಂದ 71 ನ್ನು ಗುರುತಿಸಲಾಗಿರುತ್ತದೆ.

**10.** ಸಾಕ್ಷಿದಾರರ ಪೈಕಿ ಫ್ರಾಸಾ–1 ರವರು ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾಗಿದ್ದು, ಫ್ರಾಸಾ–2 ಮತ್ತು 4 ರವರು ಪಂಚನಾಮೆ ಸಾಕ್ಷಿದಾರರಾಗಿದ್ದು, ಫ್ರಾಸಾ–3 ಮತ್ತು 5 ರವರು ಪೊಲೀಸ್ ಅಧಿಕಾರಿಗಳಾಗಿರುತ್ತಾರೆ. ದಾಖಲೆಗಳ ಪೈಕಿ ನಿಶಾನೆ ಪಿ–1 ಮಹಜರ್, ನಿಶಾನೆ ಪಿ–2 ಸ್ವ–ವರದಿ, ನಿಶಾನೆ ಪಿ–3 ಹೇಳಿಕೆಚಿ ನಿಶಾನೆ ಪಿ–4 ಪ್ರಥಮ ವರ್ತಮಾನ ವರದಿ, ನಿಶಾನೆ ಪಿ–5 ರಾಸಾಯನಿಕ ವಿಶ್ಲೇಷಣಾ ವರದಿ ಮತ್ತು ನಿಶಾನೆ ಪಿ–6 ಹೇಳಿಕೆ ಆಗಿರುತ್ತದೆ.

**11. ಫ್ರಾಸಾ–1–ಶ್ರೀ.ಬಿ.ಎನ್. ಪುನೀತ್ಃ–** ಇವರು ತನ್ನ ಮುಖ್ಯ–ವಿಚಾರಣಾ ಸಾಕ್ಷ್ಯದಲ್ಲಿ ದಿನಾಂಕ 31.03.2019 ರಂದು ಸಂಜೆ 6.00 ಗಂಟೆ ಸಮಯದಲ್ಲಿ ತಾನು ಠಾಣೆಯಲ್ಲಿರುವಾಗ ಹೆಗ್ಗಡಹಳ್ಳಿ ಗ್ರಾಮದಲ್ಲಿ ಆರೋಪಿ ತನ್ನ ಮನೆಯ ಮುಂಭಾಗದಲ್ಲಿ

ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದಿದ್ದು, ಅದರಂತೆ ತಮ್ಮ ಸಿಬ್ಬಂದಿಗಳ ಮೂಲಕ ಪಂಚರನ್ನು ಠಾಣೆಗೆ ಬರಮಾಡಿಕೊಂಡು ತಾನು, ಚಾಸಾ-2, 3, 5 ರಿಂದ 7 ರವರು ಇಲಾಖಾ ವಾಹನದಲ್ಲಿ ಸಂಜೆ 6.30 ಗಂಟೆಗೆ ಹೆಗ್ಗಡಹಳ್ಳಿ ಗ್ರಾಮಕ್ಕೆ ಹೋಗಿ ವಾಹನವನ್ನು ಮರೆಯಾಗಿ ನಿಲ್ಲಿಸಿ ನೋಡಿದಾಗ ಆರೋಪಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 90 ಎಂ ಎಲ್ ನ 71 ಒರಿಜಿನಲ್ ಛಾಯ್ಸ್ ಡಿಲಕ್ಸ್ ವಿಸ್ಕಿಯ ಮದ್ಯದ ಪೌಚ್‌ಗಳನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದರು.  ನಂತರ ಪಂಚರ ಸಮಕ್ಷಮ ದಾಳಿ ಮಾಡಿ ಆರೋಪಿಯನ್ನು ಹಿಡಿದು ವಿಚಾರಿಸಿದಾಗ ತನಗೆ ಯಾವುದೇ ರಹದಾರಿ ಇರುವುದಿಲ್ಲವೆಂದು ಹೇಳಿರುತ್ತಾರೆ ಮತ್ತು ಸದರಿ ಮದ್ಯದ ಪೌಚ್‌ಗಳನ್ನು ನಂಜನಗೂಡಿನ ಗುರುರಾಜ ವೈನ್ ಸ್ಟೋರ್ ನಿಂದ ತಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಎಲ್ಲಾ ಮದ್ಯದ ಪೌಚ್‌ಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ M ಎಂಬ  ಅಕ್ಷರದಿಂದ ಸೀಲ್ ಮಾಡಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಮತ್ತು ಮಧ್ಯದ ಪೌಚ್‌ಗಳನ್ನು ವಶಪಡಿಸಿಕೊಂಡಿರುತ್ತೇವೆ. ನಂತರ ಸ್ಥಳದಲ್ಲಿ ನಿಶಾನೆ ಪಿ-1 ರಂತೆ ಪಂಚರ ಸಮಕ್ಷಮ ಮಹಜರ್ ಜರುಗಿಸಿರುತ್ತಾರೆ. ತಾನು ವಶಪಡಿಸಿಕೊಂಡ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಮತ್ತು ಮಧ್ಯದ ಪೌಚ್‌ಗಳು ಮುದ್ದೆ ಮಾಲು-1 ರಿಂದ 71 ಆಗಿರುತ್ತದೆ.  ನಂತರ ಆರೋಪಿ ಮತ್ತು ವಶಪಡಿಸಿಕೊಂಡ ಸ್ವತ್ತು ಸಮೇತ ಸಂಜೆ 8.00 ಗಂಟೆಗೆ ಠಾಣೆಗೆ ಬಂದು ನಿಶಾನೆ ಪಿ-2 ರಂತೆ ಸ್ವ-ವರದಿ ತಯಾರಿಸಿ ಚಾಸಾ-10 ರವರಿಗೆ ಸಲ್ಲಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ.

**12.** ಮಾನ್ಯ ಪ್ರತಿರಕ್ಷಣಾ ಪರ ವಕೀಲರು ಫ್ರಾಸಾ-1 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಪಾಟೀಸವಾಲಿನಲ್ಲಿ  ಪಂಚರು ಬೇರೆ ಯಾವುದೋ ಕೆಲಸಕ್ಕಾಗಿ ಠಾಣೆಗೆ ಬಂದಿದ್ದರು. ಪಂಚರು ಯಾವ ಉದ್ದೇಶಕ್ಕಾಗಿ ಠಾಣೆಗೆ ಬಂದಿದ್ದರು ಎಂದು ನಿವೇದನೆಯಲ್ಲಿ ನಮೂದಿಸಿಲ್ಲ. ಅದೇ ರೀತಿ ಪಂಚರು ಯಾವ ಗ್ರಾಮದವರು ಮತ್ತು ಅವರ ವಿಳಾಸದ ಬಗ್ಗೆ

ನಿವೇದನೆಯಲ್ಲಿ ನಮೂದಿಸಿಲ್ಲ. ತನ್ನ ಗೈರು ಹಾಜರಿಯಲ್ಲಿ ಚಾಸಾ-10 ರವರು ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದರು ಎಂದು ಠಾಣಾ ದಿನಚರಿಯಲ್ಲಿ ನಮೂದಾಗಿರುತ್ತದೆ. ದಿನಾಂಕ 31.03.2019 ರಂದು ಈ ಪ್ರಕರಣದ ದಾಳಿಯನ್ನು ಹೊರತುಪಡಿಸಿ ಬೇರೆ ದಾಳಿ ಮಾಡಿದ ಬಗ್ಗೆ ತನಗೆ ನೆನಪಿಲ್ಲ. ಆರೋಪಿಯ ವಿಳಾಸದ ಬಗ್ಗೆ ತನಗೆ ಮೊದಲೇ ಗೊತ್ತಿದ್ದರಿಂದ ಆ ಗ್ರಾಮಕ್ಕೆ ಹೋಗಿರುತ್ತೇನೆ. ಉಪ್ಪಾರಶೆಟ್ಟಿ ಬೀದಿಯಲ್ಲಿ ಆರೋಪಿಯ ಹೆಸರಿನವರು ಇತರೆಯವರು ಕೂಡ ಇರುವುದರಿಂದ ಯಾವ ಆಧಾರದ ಮೇಲೆ ಆರೋಪಿಯ ಮನೆಯ ಬಳಿ ಹೋಗಿರಿರುತ್ತೀರಿ ಎಂದರೆ ಬಾತ್ಮೀದಾರರು ತನಗೆ ಸ್ಪಷ್ಟ ಮಾಹಿತಿ ನೀಡಿದ್ದರು. ಆರೋಪಿಯ ಮನೆ ಯಾವ ದಿಕ್ಕಿನಲ್ಲಿರುತ್ತದೆ ಎಂದು ಮಹಜರ್ ನಲ್ಲಿ ನಮೂದಿಸಿರುತ್ತೇನೆ. ಆದರೆ ನಿವೇದನೆಯಲ್ಲಿ ನಮೂದಿಸಿರುವುದಿಲ್ಲ. ಸದರಿ ಮನೆ ಆರೋಪಿಗೆ ಸೇರಿರುತ್ತದೆಂದು ತೋರಿಸಲು ತಾನು ಯಾವುದೇ ದಾಖಲೆ ಪಡೆದಿಲ್ಲ. ಸಾಮಾನ್ಯವಾಗಿ ಸಂಜೆ 6.30 ಗಂಟೆ ಸಮಯದಲ್ಲಿ ಗ್ರಾಮಗಳಲ್ಲಿ ಸಾಕಷ್ಟು ಜನರು ಸೇರುತ್ತಾರೆ. ಆ ಸಮಯದಲ್ಲಿ ಯಾವ ಉದ್ದೇಶಕ್ಕೆ ಬಂದಿರುತ್ತೇವೆ ಎಂದು ಗ್ರಾಮದವರಿಗೆ ತಿಳಿಸಿರುವುದಿಲ್ಲ. ತಾವು ದಾಳಿ ಮಾಡಿದ ಸಮಯದಲ್ಲಿ ಆರೋಪಿ ಸ್ಥಳದಲ್ಲಿದ್ದರು. ನಾವು ವಶಪಡಿಸಿಕೊಂಡಿರುತ್ತೇವೆ ಎಂದು ಹೇಳಿರುವ ಟೆಟ್ರಾ ಪ್ಯಾಕೇಟುಗಳ ಮೇಲೆ ತಾನು ಪ್ರತ್ಯೇಕ ಗುರುತು ಮಾಡಿಲ್ಲ. ಟೆಟ್ರಾ ಪ್ಯಾಕೇಟುಗಳ ಕ್ರಮ ಸಂಖ್ಯೆಗಳನ್ನು ತಾನು ಮಹಜರ್ ನಲ್ಲಿ ನಮೂದಿಸಿಲ್ಲ. ತಾವು ದಾಳಿ ಮಾಡಿದ ಸಮಯದಲ್ಲಿ ಸೀಲ್ ಮಾಡಿದ್ದ ಬಿಳಿ ಬಟ್ಟೆಗಳನ್ನು ರಾಸಾಯನಿಕ ತಜ್ಞರು ತೆಗೆದು ಪುನಃ ಅದೇ ಬಟ್ಟೆಗಳಿಂದ ಸೀಲ್ ಮಾಡಿ ವಾಪಸ್ಸು ಕಳುಹಿಸುತ್ತಾರೆ. ಮದ್ಯದ ಟೆಟ್ರಾ ಪ್ಯಾಕೇಟುಗಳ ಮೇಲೆ ಅಂಟಿಸಿರುವ ತನ್ನ ಮತ್ತು ಪಂಚರ ಸಹಿಯಿರುವ ಚೀಟಿಯ ಮೇಲೆ ಠಾಣಾ ಮೊಕದಮ್ಮೆ ಸಂಖ್ಯೆಯನ್ನು ನಮೂದಿಸಲಾಗಿದೆ ಎಂದು ನುಡಿದಿರುತ್ತಾರೆ. ಉಳಿದ ಪಾಟೀಸವಾಲು ಅಭಿಯೋಜನೆಯ ಪ್ರಕರಣವನ್ನು ಅಲ್ಲಗಳೆಯುವುದಾಗಿದೆ.

**11.** **<u>ಪ್ರಾಸಾ-2-ಶ್ರೀ.ಶಿವಯ್ಯಃ</u>-** ಇವರು ತನ್ನ ಮುಖ್ಯ-ವಿಚಾರಣಾ ಸಾಕ್ಷ್ಯದಲ್ಲಿ ನಿಶಾನೆ ಪಿ-1 ರಂತೆ ಜರುಗಿಸಿದ ಮಹಜರ್ ಗೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ. ನಿಶಾನೆ ಪಿ-1 ರಲ್ಲಿ ಏನೆಲ್ಲಾ ಬರೆದಿದೆ ಎಂದು ತನಗೆ ಗೊತ್ತಿಲ್ಲ. ತನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ಏನನ್ನೂ ವಶಪಡಿಸಿಕೊಂಡಿರುವುದಿಲ್ಲ. ತಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

**13.** ಪ್ರಾಸಾ-2 ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಪಡೆದು ಪಾಟೀಸವಾಲು ಮಾಡಿದ್ದು, ಪಾಟೀಸವಾಲಿನಲ್ಲಿಯೂ ಕೂಡ ಪ್ರಾಸಾ-2 ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸೂಚಿಸಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ.

ಮಾನ್ಯ ಪ್ರತಿರಕ್ಷಣಾ ಪರ ವಕೀಲರು ಪ್ರಾಸಾ-2 ರವರನ್ನು ಪಾಟೀಸವಾಲಿಗೆ ಒಳಪಡಿಸಿರುವುದಿಲ್ಲ

**14.** **<u>ಪ್ರಾಸಾ-3-ಶ್ರೀ.ಕವೀಶ ಕೆ ಎನ್ಃ</u>-** ಇವರು ತನ್ನ ಮುಖ್ಯ-ವಿಚಾರಣಾ ಸಾಕ್ಷ್ಯದಲ್ಲಿ ದಿನಾಂಕ 31.03.2019 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ತಾನು ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನಿ.ಪಿ-2 ರಂತೆ ನಿವೇದನೆ ಸಲ್ಲಿಸಿದ್ದು, ನಂತರ ನಿಶಾನೆ ಪಿ-4 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ. ತನಿಖೆ ಮುಂದುವರಿಸಿ ತನ್ನ ಮುಂದೆ ಹಾಜರುಪಡಿಸಿದ ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ಸ್ವತ್ತುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಆರೋಪಿಯ ವಿರುದ್ಧ ದಸ್ತಗಿರಿ ಕ್ರಮವಹಿಸಿ ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೇನೆ. ಅದೇ ದಿವಸ ಚಾಸಾ-2, 3, 5 ರಿಂದ 7ರವರ ಹೇಳಿಕೆ ಪಡೆದಿರುತ್ತೇನೆ. ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟು, ದಿನಾಂಕ 24.07.2019 ರಂದು ನಿಶಾನೆ ಪಿ-5 ರಂತೆ ರಾಸಾಯನಿಕ ವಿಶ್ಲೇಷಣಾ ವರದಿ ಪಡೆದಿರುತ್ತೇನೆ. ನಂತರ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ.

**15.** ಮಾನ್ಯ ಪ್ರತಿರಕ್ಷಣಾ ಪರ ವಕೀಲರು ಫ್ರಾಸಾ-3 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಪಾಟೀಸವಾಲಿನಲ್ಲಿ ನಿಪಿ-2 ನ್ನು ಠಾಣೆಗೆ ಬಂದ ನಂತರ ತಯಾರಿಸಿ ನೀಡಿರುತ್ತಾರೆ. ತನಿಖಾಧಿಕಾರಿಗಳ ಸಹಾಯಕರಿಂದ ನಿವೇದನೆಗಳನ್ನು ತಯಾರಿಸಿರುತ್ತಾರೆ. ಚಾಸಾ-1ರವರು ಆರೋಪಿಯನ್ನು ಠಾಣೆಗೆ ಹಾಜರುಪಡಿಸಿದ್ದು, ಅವರ ನಿರ್ದೇಶನದ ಮೇರೆಗೆ ಪ್ರಥಮ ವರ್ತಮಾನ ವರದಿ ದಾಖಲಿಸಿರುತ್ತೇನೆ. ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ತನ್ನ ಮುಂದೆ ಹಾಜರುಪಡಿಸಿದಾಗ ತಾನು ಪ್ರತ್ಯೇಕವಾಗಿ ಮಹಜರ್ ಮಾಡಿಲ್ಲ. ಎಲ್ಲಾ ಟೆಟ್ರಾ ಪ್ಯಾಕೇಟ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದೆ ಎಂದು ನುಡಿದಿರುತ್ತಾರೆ. ಉಳಿದ ಪಾಟೀಸವಾಲು ಅಭಿಯೋಜನೆಯ ಪ್ರಕರಣವನ್ನು ಅಲ್ಲಗಳೆಯುವುದಾಗಿದೆ.

**16.** **ಫ್ರಾಸಾ-4-ಶ್ರೀ.ರಾಜು. ಕೆ.ಎನ್.-** ಇವರು ತನ್ನ ಮುಖ್ಯ-ವಿಚಾರಣಾ ಸಾಕ್ಷ್ಯದಲ್ಲಿ ನಿಶಾನೆ ಪಿ-1 ರಂತೆ ಜರುಗಿಸಿದ ಮಹಜರ್ ಗೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ. ನಿಶಾನೆ ಪಿ-1 ರಲ್ಲಿ ಏನೆಲ್ಲಾ ಬರೆದಿದೆ ಎಂದು ತನಗೆ ಗೊತ್ತಿಲ್ಲ. ತನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ಏನನ್ನೂ ವಶಪಡಿಸಿಕೊಂಡಿರುವುದಿಲ್ಲ. ತಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲವೆಂದು ಸಾಕ್ಷ್ಯನುಡಿದಿರುತ್ತಾರೆ.

**17.** ಪ್ರಾಸಾ-4 ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಪಡೆದು ಪಾಟೀಸವಾಲು ಮಾಡಿದ್ದು, ಪಾಟೀಸವಾಲಿನಲ್ಲಿಯೂ ಕೂಡ ಪ್ರಾಸಾ-4 ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸೂಚಿಸಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ.

**18.** ಮಾನ್ಯ ಪ್ರತಿರಕ್ಷಣಾ ಪರ ವಕೀಲರು ಪ್ರಾಸಾ-4 ರವರನ್ನು ಪಾಟೀಸವಾಲಿಗೆ ಒಳಪಡಿಸಿರುವುದಿಲ್ಲ

**19.** **ಪ್ರಾಸಾ-5-ಶ್ರೀ.ಸುರೇಶಃ-** ಇವರು ತನ್ನ ಮುಖ್ಯ-ವಿಚಾರಣಾ ಸಾಕ್ಷ್ಯದಲ್ಲಿ ದಿನಾಂಕ 31.03.2019 ರಂದು ಸಂಜೆ 6.00 ಗಂಟೆ ಸಮಯದಲ್ಲಿ ತಾನು ಠಾಣೆಯಲ್ಲಿರುವಾಗ ಹೆಗ್ಗಡಹಳ್ಳಿ ಗ್ರಾಮದಲ್ಲಿ ಆರೋಪಿ ತನ್ನ ಮನೆಯ ಮುಂಭಾಗದಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದಿದ್ದು, ಅದರಂತೆ ತಮ್ಮ ಸಿಬ್ಬಂದಿಗಳ ಮೂಲಕ ಪಂಚರನ್ನು ಠಾಣೆಗೆ ಬರಮಾಡಿಕೊಂಡು ತಾನು, ಚಾಸಾ-2, 3, 5 ಮತ್ತು 6 ರವರು ಇಲಾಖಾ ವಾಹನದಲ್ಲಿ ಸಂಜೆ 6.30 ಗಂಟೆಗೆ ಹೆಗ್ಗಡಹಳ್ಳಿ ಗ್ರಾಮಕ್ಕೆ ಹೋಗಿ ವಾಹನವನ್ನು ಮರೆಯಾಗಿ ನಿಲ್ಲಿಸಿ ನೋಡಿದಾಗ ಆರೋಪಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 90 ಎಂ ಎಲ್ ನ 71 ಒರಿಜಿನಲ್ ಛಾಯ್ಸ್ ಡಿಲಕ್ಸ್ ವಿಸ್ಕಿಯ ಮಧ್ಯದ ಪೌಚುಗಳನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದರು. ನಂತರ ಪಂಚರ ಸಮಕ್ಷಮ ದಾಳಿ ಮಾಡಿ ಆರೋಪಿಯನ್ನು ಹಿಡಿದು ವಿಚಾರಿಸಿದಾಗ ತನಗೆ ಯಾವುದೇ ರಹದಾರಿ ಇರುವುದಿಲ್ಲವೆಂದು ಹೇಳಿರುತ್ತಾರೆ ಮತ್ತು ಸದರಿ ಮಧ್ಯದ ಪೌಚುಗಳನ್ನು ನಂಜನಗೂಡಿನ ಗುರುರಾಜ ವೈನ್ ಸ್ಟೋರ್ ನಿಂದ ತಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಎಲ್ಲಾ ಮಧ್ಯದ ಪೌಚುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ M ಎಂಬ ಅಕ್ಷರದಿಂದ ಸೀಲ್ ಮಾಡಿ ಬಿಳಿ ಬಣ್ಣದ

ಪ್ಲಾಸ್ಟಿಕ್ ಚೀಲ ಮತ್ತು ಮಧ್ಯದ ಪೌಚುಗಳನ್ನು ವಶಪಡಿಸಿಕೊಂಡಿರುತ್ತೇವೆ. ನಂತರ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರ್ ಜರುಗಿಸಿರುತ್ತಾರೆ. ವಶಪಡಿಸಿಕೊಂಡ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಮತ್ತು ಮಧ್ಯದ ಪೌಚುಗಳು ಮುದ್ದೆ ಮಾಲು-1 ರಿಂದ 71 ಆಗಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ.

**20.** ಮಾನ್ಯ ಪ್ರತಿರಕ್ಷಣಾ ಪರ ವಕೀಲರು ಫ್ರಾಸಾ-5 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಪಾಟೀಸವಾಲಿನಲ್ಲಿ ತಾವು ರಸ್ತೆಯ ಎಡಭಾಗಕ್ಕೆ ನಿಂತು ಮನೆಯ ಹಿಂಭಾಗ ನೋಡುತ್ತಿದ್ದೆವು. ತಾವು ಒಟ್ಟು 5 ಜನ ಹೋಗಿದ್ದೆವು. ಜೀಪ್ ನ್ನು ಮುಖ್ಯ ರಸ್ತೆಯಲ್ಲಿ ನಿಲ್ಲಿಸಿದ್ದೆವು ಎಂದು ನುಡಿದಿರುತ್ತಾರೆ. ಉಳಿದ ಪಾಟೀಸವಾಲು ಅಭಿಯೋಜನೆಯ ಪ್ರಕರಣವನ್ನು ಅಲ್ಲಗಳೆಯುವುದಾಗಿದೆ.

**21.** ಈ ಪ್ರಕರಣದಲ್ಲಿ ಆಪಾದಿಸುವಂತೆ ದಿನಾಂಕ 31.03.2019 ರಂದು ಸಂಜೆ 18.30 ಗಂಟೆ ಸಮಯದಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹೆಗ್ಗಡಹಳ್ಳಿ ಗ್ರಾಮದ ಉಪ್ಪಾರಶೆಟ್ಟಿ ಜನಾಂಗದ ಬೀದಿಯಲ್ಲಿರುವ ಆರೋಪಿಯು ತನ್ನ ಮನೆಯ ಮುಂಭಾಗದಲ್ಲಿ ಯಾವುದೇ ರಹದಾರಿ ಇಲ್ಲದೆ ಅಕ್ರಮವಾಗಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಒಟ್ಟು ರೂ.2,152.72 ಮೌಲ್ಯದ 90 ಎಂ.ಎಲ್. ನ 71 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಕಂಪನಿಯ ಟೆಟ್ರಾ ಪ್ಯಾಕ್‌ಗಳನ್ನು ಸ್ವಾಧೀನದಲ್ಲಿ ಇಟ್ಟುಕೊಂಡು ಮಾರಾಟ ಮಾಡಿ ಹಣ ಸಂಪಾದನೆ ಮಾಡುತ್ತಿದ್ದ ಎಂದು ಆಪಾದನೆ ಇರುತ್ತದೆ.

**22.** ಅಭಿಯೋಜನೆಯ ದಾಖಲಾತಿಗಳು ಹಾಗೂ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲುಗಳನ್ನು ಪರಿಗಣಿಸಿದಾಗ ಆರೋಪಿಯು ಒಟ್ಟು ರೂ.2,152.72 ಮೌಲ್ಯದ 90 ಎಂ.ಎಲ್. ನ 71 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಕಂಪನಿಯ ಟೆಟ್ರಾ ಪ್ಯಾಕ್‌ಗಳನ್ನು ಹೊಂದಿದ್ದು, ಅದನ್ನು ಪೊಲೀಸರು ವಶಕ್ಕೆ ಪಡೆದಿರುವುದು

ಕಂಡುಬರುತ್ತದೆ. ಸಾಕ್ಷಿದಾರರಾಗಿ ಒಟ್ಟು 10 ಜನರನ್ನು ಅಭಿಯೋಜನೆಯು ಕಾಣಿಸಿದ್ದರೂ ಸಹ ದಾಳಿಗೆ ಸಹಕರಿಸಿದ ಚಾಸಾ-1 ಮತ್ತು 7 ರವರು ನ್ಯಾಯಾಲಯದ ಮುಂದೆ ಫ್ರಾಸಾ-1 ಮತ್ತು 5 ಎಂದು ವಿಚಾರಣೆಗೊಳಪಟ್ಟಿದ್ದು, ಉಳಿದ ಸಾಕ್ಷಿದಾರರಾದ ಚಾಸಾ-5 ಮತ್ತು 6 ರವರು ದಾಳಿಗೆ ಸಹಕರಿಸಿದ ಸಾಕ್ಷಿದಾರರಾದ ಕಾರಣ, ಚಾಸಾ-7 ರವರ ವಿಚಾರಣೆಯಾಗಿದ್ದ ಮೇರೆಗೆ ಉಳಿದ ಮೇಲೆ ಹೇಳಿದ ಸಾಕ್ಷಿದಾರರ ವಿಚಾರಣೆಯನ್ನು ಅಭಿಯೋಜನೆಯು ಕೈಬಿಟ್ಟಿರುತ್ತದೆ.

**23.** ಆಪಾದಿಸಿರುವಂತೆ ಆರೋಪಿಯು ಮೇಲೆ ಹೇಳಿದ ದಿನಾಂಕದಲ್ಲಿ ಅಕ್ರಮವಾಗಿ ಮದ್ಯವನ್ನು ಮನೆಯ ಮುಂಭಾಗದಲ್ಲಿ ಸ್ವಾಧೀನ ಹೊಂದಿದ್ದು ಮಾರಾಟ ಮಾಡಿ ಹಣ ಸಂಪಾದಿಸಲು ಮುಂದಾಗಿದ್ದ ಬಗ್ಗೆ ಆಪಾದನೆ ಇಲ್ಲದಿದ್ದರೂ ಸಹ ಸ್ವತಂತ್ರ ಸಾಕ್ಷಿದಾರರು ಹಾಗೂ ದಾಳಿಯ ವೇಳೆಗೆ ಸಹಕರಿಸಿದಂತೆ ನಿಶಾನೆ ಪಿ-1ರ ಅಡಿಯಲ್ಲಿ ಸಾಕ್ಷಿದಾರರಾಗಿ ಕಾಣಿಸಿರುವ ಫ್ರಾಸಾ-2 ಮತ್ತು 4 ರವರು ಸದರಿ ದಾಖಲೆಯಲ್ಲಿ ಬರೆದಿರುವ ಯಾವುದೇ ಅಂಶ ಅಥವಾ ಪಂಚನಾಮೆ ಪ್ರಕ್ರಿಯೆ ಬಗ್ಗೆ ಸಾಕ್ಷಿ ನುಡಿಯಲು ವಿಫಲರಾಗಿರುತ್ತಾರೆ. ತಮ್ಮ ಸಮಕ್ಷಮ ಯಾವುದೇ ಅಬಕಾರಿ ವಸ್ತುಗಳನ್ನು ಫ್ರಾಸಾ-1ರವರು ನಿಶಾನೆ ಪಿ-1ರ ಅಡಿಯಲ್ಲಿ ವಶಕ್ಕೆ ಪಡೆದಿಲ್ಲವೆಂದು ನುಡಿದಿರುವ ಮೇರೆಗೆ ಸದರಿ ದಾಖಲೆಗಳ ಮೇರೆಗೆ ಜರುಗಿಸುವ ಪ್ರಕ್ರಿಯೆಯು ಸಾಬೀತಾಗಿರುವುದಿಲ್ಲ.

**24.** ಫ್ರಾಸಾ-1ರವರು ಮದ್ಯದ ಟೆಟ್ರಾ ಪ್ಯಾಕ್ ಮೇಲೆ ಪಂಚರ ಸಹಿಯನ್ನು ಪಡೆದಿರುವುದಾಗಿ ನುಡಿದಿರುತ್ತಾರೆ. ಇದರಿಂದ ಮೊದಲಿಗೆ ನಿಶಾನೆ ಪಿ-1ರ ರಡಿಯಲ್ಲಿ ಪಂಚನಾಮೆ ಜರುಗಿಸಿ ಅನಂತರ ನಿಶಾನೆ ಪಿ-2ರಂತೆ ಪ್ರಕರಣ ದಾಖಲಿಸಿರುವುದು ಕಂಡುಬರುತ್ತದೆ. ಸದರಿ ಅಂಶವು ದಾಖಲಾತಿಗಳಿಂದ ಕಂಡುಬರುವುದು ಮಾತ್ರ ಅಲ್ಲದೆ ಫ್ರಾಸಾ-1ರವರ ಪಾಟಿ ಸವಾಲಿದಿಂದಲೂ ಖಾತ್ರಿಯಾಗಿರುತ್ತದೆ. ದಾಳಿಗೆ ಫ್ರಾಸಾ-

1 ರವರೊಂದಿಗೆ ಸಹಕರಿಸಿದ ಪ್ರಾಸಾ-3 ಮತ್ತು 5 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ನುಡಿದಿರುವಂತೆ ಆರೋಪಿ ಮತ್ತು ಮದ್ಯ ಟೆಟ್ರಾ ಪ್ಯಾಕ್‌ಗಳನ್ನು ವಶಕ್ಕೆ ಪಡೆದುಕೊಂಡು ಅವುಗಳ ಕ್ರಮ ಸಂಖ್ಯೆಯನ್ನು ನಿಶಾನೆ ಪಿ-1 ರಡಿಯಲ್ಲಿ ನಿಕಾರವಾಗಿ ನಮೂದಿಸಿರುವುದು ಕಂಡು ಬಂದರೂ ಸಹ ನಿರ್ದಿಷ್ಟ ಪರಿಮಿತಿಯನ್ನು ಮೀರಿ ಗುರುರಾಜ್ ವೈನ್ಸ್ ಸ್ಟೋರ್ ರವರು ಆರೋಪಿಗೆ ಮದ್ಯವನ್ನು ವಿತರಿಸಿವುದು ಹಾಗೂ ಹಣವನ್ನು ಪಡೆದಿರುವುದು ಒಟ್ಟಾರೆ 6.390 ಲೀಟರ್ ಮದ್ಯವನ್ನು ಸದರಿ ಗುರುರಾಜ್ ವೈನ್ಸ್ ಸ್ಟೋರ್ ಮಾಲೀಕರು ಯಾವುದೇ ಅಧಿಕಾರವಿಲ್ಲದೆ ಆರೋಪಿಗೆ ಕಾನೂನಿನ ಪರಿಮಿತಿ ಮೀರಿ ಮಾರಾಟ ಮಾಡುವುದಾಗಿ ಕಂಡು ಬಂದರೂ ಸಹ ಸದರಿ ಅಂಶವು ಅಬಕಾರಿ ಕಾಯ್ದೆಯ ಉಲ್ಲಂಗಣೆ ಮಾಡಿದಲ್ಲದೆ ಶಿಕ್ಷಾರ್ಹರಾಗಿದ್ದರೂ ಗುರುರಾಜ್ ವೈನ್ಸ್‌ಸ್ಟೋರ್ ಮಾಲೀಕರಿನ ಬಳಿ ಮುದ್ದೆ ಮಾಲು-1 ರಿಂದ 71 ನ್ನು ಅವರ ಅಂಗಡಿಯಿಂದಲ್ಲೇ ಆರೋಪಿ ಖರೀದಿಸಿದ್ದು ಮತ್ತು ಅದನ್ನು ಮಾರಾಟ ಮಾಡಲು ಪರಿಮಿತಿ ಮೀರಿ ಮಾರಾಟ ಮಾಡಿರುವ ಬಗ್ಗೆ ಸದರಿ ಮಾಲೀಕರನ್ನು ವಿಚಾರಣೆ ಮಾಡಿ ಅವರು ತಮಗೆ ವಿತರಿಸಲಾಗಿರುವ ಅಬಕಾರಿ ಪರವಾನಿಯನ್ನು ಉಲ್ಲಂಗಿಸಿರುವ ಬಗ್ಗೆ ಸೂಕ್ತ ಕ್ರಮವನ್ನು ವಹಿಸದೆ ತನಿಖಾಧಿಕಾರಿಗಳೂ ಕಂಡರೂ ಸಂಪೂರ್ಣ ತನಿಖೆ ಕೈಗೊಂಡಿಲ್ಲ ಎಂಬುದು ಗೋಚರಿಸುತ್ತದೆ.

**25.** ಆದರೂ ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ಬಳಿ ಒಟ್ಟು 6.390 ಲೀ. ಮದ್ಯವು ಲಭ್ಯವಿತ್ತು ಹಾಗೂ ಆತ ಅದನ್ನು ಸಾರ್ವಜನಿಕರಿಗೆ ಮಾರಾಟ ಮಾಡಿ ಹೆಚ್ಚಿನ ಹಣವನ್ನು ಅಕ್ರಮವಾಗಿ ಗಳಿಸಲು ಮುಂದಾಗಿದ್ದರೆ, ಅತನ ಬಳಿ ಖರೀದಿಸಲು ಇದ್ದ ಯಾವುದೇ ಗ್ರಾಹಕರನ್ನು ತನಿಖಾಧಿಕಾರಿಗಳೂ ಘಟನಾ ಸ್ಥಳದಲ್ಲಿ ಪತ್ತೆ ಹಿಡಿದಿರುವುದಿಲ್ಲ ಅಥವಾ ಅವರ ಬಗ್ಗೆ ಯಾವುದೇ ಕುರುಹುಗಳನ್ನು ಕಲೆ ಹಾಕಿರುವುದಿಲ್ಲ. ಆದ್ದರಿಂದ ಆರೋಪಿಯು ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡಿ ಹಣ ಸಂಪಾದನೆ

ಮಾಡಿದ್ದರೆಂದು ನಿಶಾನೆ ಪಿ–1ರ ರಡಿಯಲ್ಲಿ ಆ ರೀತಿ ಎಷ್ಟು ಮೊತ್ತವನ್ನು ಆರೋಪಿಯು ಗಳಿಸಿದ್ದ ಎಂಬ ಬಗ್ಗೆ ಅಭಿಯೋಜನೆಯು ನಿದಿರ್ಷ್ಟವಾಗಿ ಕಾಣಿಸಬೇಕಾಗಿತ್ತು. ಸ್ವತ್ತು ಪಟ್ಟಿಯಲ್ಲಿ ಆರೋಪಿಯಿಂದ ಅಂಗಡಿ ಜಪ್ತಿ ಮಾಡಿ ಆತ ಅಕ್ರಮವಾಗಿ ಮಧ್ಯ ಮಾರಾಟ ಮಾಡಿ ಗಳಿಸಿರುವ ಯಾವುದೇ ಹಣವನ್ನು ವಶಕ್ಕೆ ಪಡೆದಿರುವುದು ಕಂಡುಬರುವುದಿಲ್ಲ.

**26.** ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಮುದ್ದೆ ಮಾಲು –1 ರಿಂದ 71 ನ್ನು ಆರೋಪಿಯಿಂದ ವಶಕ್ಕೆ ಪಡೆದ ಬಗ್ಗೆ ಯಾವುದೇ ಪ್ರತ್ಯಕ್ಷ ಸ್ವತಂತ್ರ ಸಾಕ್ಷಿದಾರರು ಲಭ್ಯವಿಲ್ಲದೆ, ಆರೋಪಿಯು ಸದರಿ ಮಧ್ಯವನ್ನು ಮಾರಾಟ ಮಾಡಿ ಅಕ್ರಮವಾಗಿ ಹಣ ಗಳಿಸಿತ್ತಿದ್ದ ಎಂಬ ಆಪಾದನೆಗೆ ಸಲ್ಲುವಂತಹ ಸಾಂದರ್ಭಿಕ ಅಥವಾ ಮೌಖಿಕ ಸಾಕ್ಷ್ಯದಾರಗಳು ಲಭ್ಯವಿರುವುದಿಲ್ಲ. ಈ ಅಂಶಗಳನ್ನು ಪರಿಗಣಿಸಿದಾಗ ಅಭಿಯೋಜನೆಯು ಆರೋಪಿಯ ವಿರುದ್ದ ಹೊರಡಿಸಿರುವ ಸಾಕ್ಷ್ಯದಾರಗಳ ಮೂಲಕ ಅಪಾದನೆಯನ್ನು ರುಜುವಾತುಪಡಿಸಿರುವುದಿಲ್ಲ. ಅದರಿಂದ ಈ ಎಲ್ಲಾ ಅನುಮಾನದ ಲಾಭವನ್ನು ಪಡೆಯಲು ಆರೋಪಿಯು ಅಹರ್ನಾಗಿರುತ್ತಾನೆ.

**27.** ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಆರೋಪಿ ಪರ ವಕೀಲರು ಮಾಡಿದ ಸೂಚನೆಯಂತೆ ಅಬಕಾರಿ ಇಲಾಖೆಯಿಂದ ಪ್ರಕರಣಕ್ಕೆ ಬೇಕಾದ ಮುದ್ದೆ ಮಾಲುಗಳನ್ನು ಅಳವಡಿಸಿಕೊಂಡು ಆರೋಪಿಯ ವಿರುದ್ಧ ಒಂದು ಪ್ರಕರಣವನ್ನು ಸೃಷ್ಟಿಸಿರುವಂತೆ ಕಂಡುಬರುತ್ತದೆಯೇ ಹೊರತು ಸ್ಥಳೀಯ ಸಾರ್ವಜನಿಕರನ್ನು ವಿಚಾರಿಸಿ ಅವರನ್ನು ಸಾಕ್ಷಿದಾರರನ್ನಾಗಿ ಬರಮಾಡಿಕೊಳ್ಳಲು ಸಹ ತನಿಖಾಧಿಕಾರಿಗಳು ವಿಫಲವಾಗಿರುವುದು ಕಂಡುಬರುತ್ತವೆ. ಸಾರ್ವಜನಿಕ ಸ್ಥಳದಲ್ಲೇ ಮಧ್ಯ ಮಾರಾಟ ಮಾಡುತ್ತಿದ್ದರೆ ಬೇರೊಂದು ಜಾಗದಿಂದ ಯಾವ ಕಾರಣಕ್ಕಾಗಿ ಸಾರ್ವಜನಿಕ ಸಾಕ್ಷಿದಾರರನ್ನು ಕರೆದುಕೊಂಡು ಹೋದರು ಎಂಬುದು ಸಹ ತಿಳಿದುಬರುವುದಿಲ್ಲ. ಈ ಎಲ್ಲಾ ವಿಚಾರಗಳನ್ನು

ಪರಿಗಣಿಸಿದಾಗ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯು ಆಪಾದಿಸಿದಂತೆ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡಿ ಹಣಗಳಿಸಿರುವುದು ಕಂಡು ಬರುವುದಿಲ್ಲ. ಯಾವುದೇ ಅಬಕಾರಿ ಕಾಯ್ದೆಯ ಉಲ್ಲಂಘನೆದೂ ಸಹ ಈ ನ್ಯಾಯಾಲಯಕ್ಕೆ ಗೋಚರಿಸುವುದಿಲ್ಲ. ಆದ್ದರಿಂದ ಈ ಎಲ್ಲಾ ಅನುಮಾನದ ಲಾಭಗಳನ್ನು ಪಡೆಯಲು ನ್ಯಾಯಾಲಯದ ಮುಂದಿರುವ ಆರೋಪಿ ಅರ್ಹನಾಗಿರುತ್ತಾನೆ. ಆದಕಾರಣ ನನ್ನ ನಿರ್ಣಯಕ್ಕೆ ಬಂದ ಅಂಶ 1 ಮತ್ತು 2 ನ್ನು **''ನಕಾರಾತ್ಮಕವಾಗಿ''** ಉತ್ತರಿಸಿರುತ್ತೇನೆ.

**28.** **<u>ಅಂಶ-3</u>:-** ಮೇಲ್ಕಂಡ ಚರ್ಚೆಯಲ್ಲಿ ಅಂಶ-1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಿರುವುದರಿಂದ ಆರೋಪಿಯು ಸಂಶಯದ ಲಾಭ ಹೊಂದಿ ಬಿಡುಗಡೆಗೆ ಅರ್ಹರಾಗಿದ್ದು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

**<u>ಆದೇಶ</u>**

ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 248 (1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯ ವಿರುದ್ಧ ಹೊರಿಸಲಾದ ಕರ್ನಾಟಕ ಅಬಕಾರಿ ಕಾಯಿದೆ ಕಲಂ-32 ಮತ್ತು 34 ರಡಿಯಲ್ಲಿನ ಆರೋಪಗಳಿಂದ ಆರೋಪಿಯನ್ನು ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆಗೆ ಆದೇಶಿಸಲಾಗಿದೆ.

ಆರೋಪಿ ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯನ್ನು ರದ್ದುಗೊಳಿಸಲು ಆದೇಶಿಸಲಾಗಿದೆ ಹಾಗೂ ಅವರ ಜಾಮೀನುದಾರರನ್ನು ಸ್ವತಂತ್ರ್ಯಗೊಳಿಸಲು ಆದೇಶಿಸಿದ್ದೇನೆ.

ಮು.ಮಾ.1 ರಿಂದ 71 ನ್ನು ಸಂಬಂಧಪಟ್ಟ ಇಲಾಖೆಗೆ ಮೇಲ್ಮನವಿ ಅವಧಿ ಮುಗಿದ ನಂತರ ಹಿಂದಿರುಗಿಸಲು ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರರ ಮೂಲಕ ಬೆರಳಚ್ಚು ಮಾಡಿಸಿದ್ದು, ನಂತರ ಅದನ್ನು ಓದಿ, ತಿದ್ದಿ, ಪರಿಷ್ಕರಿಸಿ, ಈ ದಿನ ಅಂದರೆ ದಿನಾಂಕಃ **29/06/2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಶ್ರುತಿ ಶ್ರೀ. ಎಸ್.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ನಂಜನಗೂಡು.

**: ಅ ನು ಬಂ ಧ :**

**01. ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:-**

| | | |
|---|---|---|
| ಫ್ರಾಸಾ-1 | : | ಶ್ರೀ.ಬಿ.ಎನ್. ಪುನೀತ್ |
| ಫ್ರಾಸಾ-2 | : | ಶ್ರೀ.ಶಿವಯ್ಯ |
| ಫ್ರಾಸಾ-3 | : | ಶ್ರೀ.ಕವೀಶ ಕೆ ಎನ್ |
| ಫ್ರಾಸಾ-4 | : | ಶ್ರೀ.ರಾಜು ಕೆ ಎನ್ |
| ಫ್ರಾಸಾ-5 | : | ಶ್ರೀ.ಸುರೇಶ |

**02. ಅಭಿಯೋಜನೆಯ ಪರವಾಗಿ ಹಾಜರುಪಡಿಸಿದ ದಸ್ತಾವೇಜುಗಳ ಪಟ್ಟಿ:**

| | | |
|---|---|---|
| ನಿಪಿ-1 | : | ಮಹಜರ್ |
| ನಿಪಿ-1(ಎ) | : | ಫ್ರಾಸಾ-1 ರವರ ಸಹಿ |
| ನಿಪಿ-1(ಬಿ) | : | ಫ್ರಾಸಾ-2 ರವರ ಸಹಿ |
| ನಿಪಿ-1(ಸಿ) | : | ಫ್ರಾಸಾ-4 ರವರ ಸಹಿ |
| ನಿಪಿ-2 | : | ಸ್ವ-ವರದಿ |
| ನಿಪಿ-2(ಎ) | : | ಫ್ರಾಸಾ-1 ರವರ ಸಹಿ |
| ನಿಪಿ-2(ಬಿ) | : | ಫ್ರಾಸಾ-3 ರವರ ಸಹಿ |
| ನಿಪಿ-3 | : | ಫ್ರಾಸಾ-2 ರವರ ಅಲ್ಲಗಳೆದ ಹೇಳಿಕೆ |
| ನಿಪಿ-4 | : | ಪ್ರಥಮ ವರ್ತಮಾನ ವರದಿ |
| ನಿಪಿ-4(ಎ) | : | ಫ್ರಾಸಾ-3 ರವರ ಸಹಿ |
| ನಿಪಿ-5 | : | ರಾಸಾಯನಿಕ ವಿಶ್ಲೇಷಣಾ ವರದಿ |
| ನಿಪಿ-5(ಎ) | : | ಫ್ರಾಸಾ-3 ರವರ ಸಹಿ |
| ನಿಪಿ-6 | : | ಫ್ರಾಸಾ-4 ರವರ ಅಲ್ಲಗಳೆದ ಹೇಳಿಕೆ |

**03. ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟ ಮುದ್ದೆಮಾಲುಗಳ ಪಟ್ಟಿ:**

**ಮುದ್ದೆ ಮಾಲು-1 ರಿಂದ 71 :** ಮದ್ಯದ ಪ್ಯಾಕೇಟ್‌ಗಳು

**04. ಆರೋಪಿಯ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:**

- ಇಲ್ಲ -

**05. ಆರೋಪಿಯ ಪರವಾಗಿ ಹಾಜರುಪಡಿಸಿದ ದಸ್ತಾವೇಜುಗಳ ಪಟ್ಟಿ:**

– ಇಲ್ಲ –

**(ಶ್ರುತಿ ಶ್ರೀ. ಎಸ್.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ನಂಜನಗೂಡು.